ಕರ್ನಾಟಕ ರಾಜ್ಯದಲ್ಲಿ ಅರಣ್ಯ ಇಲಾಖೆಯ ಅಧೀನದಲ್ಲಿರುವ ಗಂಧದ ಡಿಪೋಗಳು

೧೯೪೪. —ಶ್ರೀ ಡಿ. ಜ. ಬಸವಣ್ಣಗೌಡರ (ಹೊನ್ನಾಳಿ) ಮಾನ್ಯ ಅರಣ್ಯ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಕರ್ನಾಟಕ ರಾಜ್ಯದಲ್ಲಿ ಅರಣ್ಯ ಇಲಾಖೆಯ ಅಧೀನದಲ್ಲಿರುವ ಗಂಧದ ಕಟ್ಟಿಗೆಗಳ ಸಂಗ್ರಹಣ ಡಿಪೋಗಳ ಸಂಖ್ಯೆ ಎಷ್ಟು? (ಡಿಪೋವಾರು ಇಲಾಖೆ ಸಂಗ್ರಹಿಸಿರುವ ಕಟ್ಟಿಗೆಯ ಪ್ರಮಾಣದ ವಿವರವನ್ನೊದಗಿಸುವುದು (ಟನ್ನುಗಳಲ್ಲಿ).

(ಆ) ಎಷ್ಟು ರೂಪಾಯಿ ಮೌಲ್ಯದ ಕಟ್ಟಿಗೆ ಸಂಗ್ರಹವಾಗಿದೆ?

ಶ್ರೀ ಜಿ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಆರು

ಡಿಪೋ	ದಾಸ್ತಾನಿರುವ ಗಂಧದ ಪ್ರಮಾಣ
(೧) ಶಿವಮೊಗ್ಗ	೧೫೦೦ ಟನ್ನುಗಳು
(೨) ಮೈಸೂರು	೧೦೫ ,,
(೩) ತರೀಕೆರೆ	೧೦೫ ,,
(೪) ಕುಶಾಲನಗರ	೭೦ -.
(೫) ಧಾರವಾಡ	೫೮ .;
(೬) ಹಾಸನ	೨೫ ..

(ಆ) ಸುಮಾರು ೧೦ ಕೋಟಿ ರೂಪಾಯಿಗಳು

ರಾಜ್ಯದಲ್ಲಿ ಪಶುವೈದ್ಯ ಶಾಲೆಗಳ ಆವಶ್ಯಕತೆಯ ಬಗ್ಗೆ

೮೩೬. ಶ್ರೀ ಬಿ. ಆರ್. ನೀಲಕಂಠಪ್ಪ, (ತರೀಕೆರೆ) ಮಾನ್ಯ ಪಶು ಸಂಗೋಪನಾ ಹಾಗೂ ಪಶುವೈದ್ಯ ಸೇವೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಎಷ್ಟು ಪಶುವೈದ್ಯ ಶಾಲೆಗಳ ಅವಶ್ಯಕತೆ ಇದೆ?

(ಆ) ಆ ಪೈಕಿ ೧೯೮೬-೮೭ ಮತ್ತು ೧೯೮೭-೮೮ರಲ್ಲಿ ಎಷ್ಟು ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸಲಾಗಿದೆ?

ಶ್ರೀ ಸಿದ್ದರಾಮಯ್ಯ (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು).—

(ಅ) ೨೦೧೧. ಆದರೆ ರಾಜ್ಯದಲ್ಲಿ ಈಗ ಒಟ್ಟು ೧೨೩೬ ಪಶುವೈದ್ಯ ಶಾಲೆಗಳು ಕಾರ್ಯ ನಿರ್ವಹಿಸುತ್ತಲಿವೆ.

(ಆ) ೧೯೮೬-೮೭ರಲ್ಲಿ ಒಂದು ಪಶುವೈದ್ಯ ಶಾಲೆಯನ್ನು ಪ್ರಾರಂಭಿಸಲಾಗಿದೆ. ೧೯೮೭-೮೮ರಲ್ಲಿ ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸಿಲ್ಲ.

ತರೀಕೆರೆ ತಾಲ್ಲೂಕಿನಲ್ಲಿ ಪಶುಸಂಗೋಪನೆ ಆಸ್ಪತ್ರೆ ಮಂಜೂರಾತಿ

೮೪೦. ಶ್ರೀ ಬಿ. ಆರ್. ನೀಲಕಂಠಪ್ಪ. (ತರೀಕೆರೆ) ಮಾನ್ಯ ಪಶುಸಂಗೋಪನಾ ಹಾಗೂ ಪಶುವೈದ್ಯ ಸೇವೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ಪಶು ಸಂಗೋಪನಾ ಆಸ್ಪತ್ರೆಗಳಿವೆ ?

(ಆ) ೧೯೮೨-೮೩, ೮೩-೮೪ ಹಾಗೂ ೮೪-೮೫ನೇ ಸಾಲಿಂಗಳಲ್ಲಿ ಎಷ್ಟು ಆಸ್ಪತ್ರೆಗಳನ್ನು ಮಂಜೂರಾತಿ ಮಾಡಲಾಗಿದೆ?